## ‘ಕುಕ್ ಬೇಕು’

ದಿಢೀರನೆ ಹೋಟಲ್ ಒಂದಕ್ಕೆ ನುಗ್ಗಿದ ಧಡಿಯನೊಬ್ಬ ಗಲ್ಲಾಪೆಟ್ಟಿಗೆಯಲ್ಲಿ ಕುಳಿತಿದ್ದ ಮ್ಯಾನೇಜರ್‌ನನ್ನು ಹೊರಗೆಳೆದು ತಾರಾಮಾರ ಹೊಡೆಯಲಾರಂಭಿಸಿದ. ಅಕ್ಕಪಕ್ಕದವರು ಗುಂಪುಗೂಡಿ ಅವನನ್ನು ಹಿಡಿದು, ‘ಏನಾಗಿದೆ ನಿನಗೆ? ಏಕೆ ಹೀಗೆ ಅವರನ್ನು ಕುಕ್ಕಿ ಹೊಡೀತಿದೀಯಾ?’ ಎಂದು ಕೇಳಿದರು. ಧಡಿಯ ತನ್ನ ಬಳಿ ಇದ್ದ ಪೇಪರ್‌ನಲ್ಲಿ ಬಂದಿದ್ದ ಜಾಹೀರಾತು ತೋರಿಸಿದ. ಅದರಲ್ಲಿ ‘ಕುಕ್ ಬೇಕು’ ಅಂತ ಇತ್ತು!

**ಸುಮನಾ**





## ಸೋಮಾರಿ

ಗುಂಡಣ್ಣನವರು ಸರ್ಕಾರಿ ಕೆಲಸದಿಂದ ನಿವೃತ್ತರಾಗಿ ಆರು ತಿಂಗಳಾಗಿತ್ತು. ಮಾಡಲು ಕೆಲಸವಿಲ್ಲದ್ದರಿಂದ ಎಲ್ಲ ಸಾವಕಾಶವಾಗಿ ನಡೆಯುತ್ತಿತ್ತು. ಬೆಳಗ್ಗೆ ಅವರು ಏಳುವುದು ಒಂಬತ್ತು ಗಂಟೆಯ ತರುವಾಯವೇ. ಅಂದೂ ಸಹ ಹಾಸಿಗೆಯಲ್ಲೇ ಆರಾಮಾಗಿದ್ದರು. ಆಗ ಕೇಳಿಸಿತು ಎದುರು ಮನೆಯಾಕೆಯ ಮುಂದೆ ಮಡದಿ ಶಕುಂತಲಾ ಒಪ್ಪಿಸುತ್ತಿರುವ ವರದಿ: ‘ಎಂಥಾ ಸೋಂಬೇರಿ ಅಂತಿರಿ… ಈಗೀಗ ಬಿದ್ದಲ್ಲಿಂದ ಎದ್ದೇಳೋದೇ ಇಲ್ಲ. ರಾತ್ರಿ ಮನೆಗೆ ಕಳ್ಳ ನುಗ್ಗಿದರೂ ಮಿಸುಕಾಡಲ್ಲಾ ಅಂತಾನೆ… ಇವನಿಗೆ ಹಾಕೊ ಅನ್ನ ದಂಡ…’ ಇದನ್ನ ಆಲಿಸಿದ ರಾಯರಿಗೆ ರೋಷ ಉಕ್ಕಿಬಂತು. ಒಳಗೆ ಬಂದ ಮಡದಿಯನ್ನು ತರಾಟೆಗೆ ತೆಗೆದುಕೊಂಡರು. ‘ಏನೇ ಹೇಳ್ದೆ? ನಾನು ಸೋಂಬೇರಿನಾ? ನನಗೆ ಹಾಕೊ ಅನ್ನ ದಂಡಾನಾ?’ ಆಕೆಗೆ ನಗೆ ತಡೆಯಲಾಗಲಿಲ್ಲ. ‘ನಾನು ನಮ್ಮ ಮುದ್ದು ‘ಮೋತಿ’ ಬಗ್ಗೆ ಹೇಳ್ತಿದ್ದೆ. ಪಾಪ, ಮೋತಿಗೆ ಏನಾಗಿದೆಯೋ ನೋಡಿ, ಊಟಾನೂ ತಿಂತಿಲ್ಲಾ ಅವನು… ಡಾಕ್ಟರ್ ಹತ್ತಿರ ಆದ್ರೂ ಕರಕೊಂಡು ಹೋಗಿ’ ಎಂದು ಬಿಸಿಬಿಸಿ ಕಾಫಿ ನೀಡಿದರು.

**ಡಿ.ವಿ. ಮೋಹನ ಪ್ರಕಾಶ್**